**ದಿನಾಂಕಃ 02.12.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿ 1(ಸಿ) , 3 ಎ(iii), 5(ಸಿ), 6(ಎ), 7(ಎ), (ಬಿ), (ಸಿ) (ಎಫ್) ಮತ್ತು 8 ನೇ ಪ್ರತಿವಾದಿ ಪರವಾಗಿ ಶ್ರೀ. ಪಿ ಆರ್ .ವಕೀಲರಿಂದಃ**

ಕ್ರಯ ಪತ್ರದಲ್ಲಿ ಎಷ್ಟು ವಿಸ್ತೀರ್ಣ ಬರೆದಿದೆ ಎಂದು ನೋಡಿದ್ದೀರಾ ಎಂದರೆ ನೋಡಿದ್ದೇನೆ ಎನ್ನುತ್ತಾರೆ. ಎಷ್ಟು ವಿಸ್ತೀರ್ಣ ಇದೆ ಎಂದರೆ 4 ಎಕರೆ 1 ಗುಂಟೆ ಇದೆ ಎನ್ನುತ್ತಾರೆ. ನೀವು ಕೇಸು ದಾಖಲಿಸಿರುವ ಷೆಡ್ಯೂಲ್ ವಿಸ್ತೀರ್ಣ ಎಷ್ಟು ಎಂದರೆ 4 ಎಕರೆ 1 ಗುಂಟೆ ಇದೆ ಎನ್ನುತ್ತಾರೆ. 1987 ರಲ್ಲಿ ಒತ್ತುವರಿ ಮಾಡಿದ್ದಾರೆ ಎನ್ನುವ ವಿಚಾರ ಗೊತ್ತಾಗಿದೆ ಎಂದು ಹೇಳುತ್ತಿರಲ್ಲ, ಆ ನಂತರ ನಿಮ್ಮ ಮತ್ತು ಅವರ ನಡುವೆ ಮಾತುಕತೆ ಆಗಿತ್ತಾ ಎಂದರೆ ಇವತ್ತಿನವರೆಗೂ ಆಗಿಲ್ಲ ಎನ್ನುತ್ತಾರೆ. ಈ ದಾವೆಯನ್ನು ಹೂಡಲು ವ್ಯಾಜ್ಯ ಕಾರಣ ಏನು ಎಂದು ತಿಳಿದುಕೊಂಡಿದ್ದೀರಾ ಎಂದರೆ ನಾನು ಜಮೀನು ತೆಗೆದುಕೊಂಡ ಅಳತೆ ಮಾಡಿಸಿದಾಗ ಒತ್ತುವರಿ ಆಗಿರುವುದು ಗೊತ್ತಾಗಿದೆ ಎನ್ನುತ್ತಾರೆ.

ಓ.ಎಸ್ ನಂ.287/1989 ರಲ್ಲಿ ತೋರಿಸಿರುವ ವ್ಯಾಜ್ಯ ಕಾರಣ ಹೊರತುಪಡಿಸಿ, ಹೊಸದಾಗಿ ಯಾವುದೇ ವ್ಯಾಜ್ಯ ಕಾರಣ ಉಂಟಾಗಿಲ್ಲ ಎಂದರೆ ಸರಿ. ನಿಮ್ಮ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಸದರಿ ದಾವೆಯಲ್ಲಾದ ವ್ಯಾಜ್ಯ ಕಾರಣ ಹೊರತುಪಡಿಸಿ, ಹೊಸದಾಗಿ ಯಾವುದೇ ವ್ಯಾಜ್ಯ ಕಾರಣ ಉಂಟಾಯಿತು ಎಂದು ಹೇಳಿದ್ದೀರಾ ಎಂದರೆ ಸಾಕ್ಷಿ ಮೊದಲು ಇಲ್ಲ ಎನ್ನುತ್ತಾರೆ ನಂತರ ನೆನಪಿಲ್ಲ ಎನ್ನುತ್ತಾರೆ. ಮಾನ್ಯ ಗೌರವಾನ್ವಿತ ಉಚ್ಛ ನ್ಯಾಯಾಲಯದಲ್ಲಿ ಆರ್.ಎಸ್.ಎ ನಂ.2484/2006 ರಲ್ಲಿ ಏನು observation ಮಾಡಿದ್ದಾರೆ ಗೊತ್ತಾ ಎಂದರೆ ನೆನಪಿಲ್ಲ ಎನ್ನುತ್ತಾರೆ. 1987 ರ ಪ್ರಕರಣ ತೀರ್ಮಾನ ವಾದ ನಂತರ ಪ್ರತಿವಾದಿಗಳ ಜೊತೆ ಜಮೀನಿನ ವಿಚಾರವಾಗಿ ಯಾವತ್ತಾದ್ರೂ ಮಾತಕತೆ ಮಾಡಿದ್ರ ಎಂದರೆ ಇಲ್ಲ ಎನ್ನುತ್ತಾರೆ.

ನಿಮ್ಮ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಮಾತುಕತೆ ಆಗಿಲ್ಲ ಎನ್ನುವ ವಿಚಾರವನ್ನು ಹೇಳಿದ್ದೀರಾ ಎಂದರೆ ನೆನಪಿಲ್ಲ ಎನ್ನುತ್ತಾರೆ. ದಿಃ 16.07.1947 ರ ದಿನಾಂಕಕ್ಕೆ ಸರ್ಕಾರದವರು ಅಬ್ದುಲ್ ಗಫರ್ ಅವರಿಗೆ ಯಾವುದೇ ರೀತಿಯ ಹಕ್ಕನ್ನು ಕೊಟ್ಟಿರಲಿಲ್ಲ ಎಂದರೆ ಸರಿಯಲ್ಲ. ಆ ರೀತಿ ಹಕ್ಕನ್ನು ಅಬ್ದುಲ್ ಗಫರ್ ಅವರಿಗೆ ಕೊಟ್ಟಿದ್ದರು ಎನ್ನುವುದಕ್ಕೆ ಏನಾದರೂ ದಾಖಲೆ

ಹಾಜರುಪಡಿಸಿದ್ದೀರಾ ಎಂದರೆ ಹಾಜರುಪಡಿಸಿದ್ದೇನೆ ಎನ್ನುತ್ತಾರೆ. ಸಾಕ್ಷಿಯ ಪರವಾಗಿ ಹಾಜರುಪಡಿಸಿದ ದಾಖಲೆಗಳನ್ನು ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಗೆ ತೋರಿಸಿ, ನೀವು ಆ ರೀತಿ ಹಾಜರುಪಡಿಸಿದ ದಾಖಲೆ ಯಾವುದು ಎಂದು ಕೇಳಿದ್ದಕ್ಕೆ ಸಾಕ್ಷಿಯು ನಿಪಿ-26 ರ ದಾಖಲೆ ಎಂದು ನೋಡಿ ಹೇಳುತ್ತಾರೆ. ನಿಪಿ-26 ರ ದಾಖಲೆಯಲ್ಲಿ ದಿಃ 16.07.1947 ಎನ್ನುವ ದಿನಾಂಕ ನಮೂದು ಮಾಡಿಲ್ಲ ಎಂದರೆ ನಾನು ದಿನಾಂಕವನ್ನೇ ಹೇಳಿರುವುದಿಲ್ಲ ಎನ್ನುತ್ತಾರೆ.

ನೀವು ಹಾಜರುಪಡಿಸಿರುವ ದಾಖಲೆಗಳಲ್ಲಿ ಬರೆದಿರುವ ಅಂಶಗಳ ಬಗ್ಗೆ ನಿಮಗೆ ಮಾಹಿತಿ ಇಲ್ಲ ಎಂದರೆ ಸರಿಯಲ್ಲ. ದಿಃ 16.07.1947 ಕ್ಕೆ ಸಂಬಂಧಪಟ್ಟಂತೆ ಯಾವುದೇ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಎಂದರೆ ಎಲ್ಲಾ ದಾಖಲೆ ಕೊಟ್ಟಿದ್ದೇನೆ ಎನ್ನುತ್ತಾರೆ. ದಿಃ 16.07.1947 ಕ್ಕೆ ಅಬ್ದುಲ್ ಗಫರ್ ಅವರಿಗೆ ಸ.ನಂ.117 ರ ಮೇಲೆ ಯಾವುದೇ ಹಕ್ಕು ಪ್ರಾಪ್ತವಾಗಿಲ್ಲ, ಆ ಕಾರಣದಿಂದ ಉತ್ತನಲ್ಲಪ್ಪ ಅವರಿಗೆ ಯಾವುದೇ ಹಕ್ಕು ಪ್ರಾಪ್ತವಾಗಿಲ್ಲ ಎಂದರೆ ಸರಿಯಲ್ಲ.

**ಮುಂದುವರೆದ ಪಾಟೀ ಸವಾಲನ್ನು ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

**ಓ ಹೇ ಕೇ ಸರಿ ಇದೆ.**

Sd/-
**1 ನೇ ಹೆಚ್ಚುವರಿ ಹಿರಿಯ ಸಿ.ಜೆ ಮತ್ತು ಜೆ.ಎಂ.ಎಫ್.ಸಿ**
**ಚಿಕ್ಕಬಳ್ಳಾಪುರ.**